# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 676

ಸದಸ್ಯರ ಹೆಸರು : ಶ್ರೀ ಮುನಿರಾಜುಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 23-12-2022

ಉತ್ತರಿಸುವ ಸಚಿವರು : ಕೃಷಿ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೃಷಿ ಯಂತ್ರಧಾರೆ ಯೋಜನೆಗಾಗಿ ರಾಜ್ಯ ಸರ್ಕಾರ ವಾರ್ಷಿಕವಾಗಿ ಮಾಡುತ್ತಿರುವ ವೆಚ್ಚವೆಷ್ಟು;</td><td>ಕೃಷಿ ಯಂತ್ರಧಾರೆ ಯೋಜನೆಯಡಿ ವರ್ಷವಾರು ಭರಿಸಿದ ವೆಚ್ಚದ ವಿವರಗಳು ಈ ಕೆಳಕಂಡಂತಿವೆ;<br><br>
<table>
<tr><th>ವರ್ಷ</th><th>ಭರಿಸಿದ ವೆಚ್ಚ (ರೂ.ಲಕ್ಷಗಳಲ್ಲಿ)</th></tr>
<tr><td>2018-19</td><td>3045.69</td></tr>
<tr><td>2019-20</td><td>3443.68</td></tr>
<tr><td>2020-21</td><td>5147.24</td></tr>
<tr><td>2021-22</td><td>2348.78</td></tr>
</table>
<br>Year wise details of expenditure incurred under Krishi Yantra Dhare Scheme are as below ;<br><br>
<table>
<tr><th>Year</th><th>Expenditure (Rs.in Lakhs)</th></tr>
<tr><td>2018-19</td><td>3045.69</td></tr>
<tr><td>2019-20</td><td>3443.68</td></tr>
<tr><td>2020-21</td><td>5147.24</td></tr>
<tr><td>2021-22</td><td>2348.78</td></tr>
</table>
</td></tr>
<tr><td>ಆ)</td><td>ಪ್ರಸ್ತುತ ರಾಜ್ಯದ ಎಷ್ಟು ಹೋಬಳಿ ಕೇಂದ್ರಗಳಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳಿವೆ; ಅವುಗಳ ನಿರ್ವಹಣೆಯನ್ನು ಯಾರಿಗೆ ನೀಡಲಾಗಿದೆ; ಸರ್ಕಾರ ಇದರ ಮೇಲ್ವಿಚಾರಣೆಯನ್ನು ಯಾವ ರೀತಿ ನಿರ್ವಹಿಸಲಿದೆ;</td><td>ಪ್ರಸ್ತುತ ರಾಜ್ಯದ 689 ಹೋಬಳಿ ಕೇಂದ್ರಗಳಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳಿವೆ. ಅವುಗಳ ನಿರ್ವಹಣೆಗಾಗಿ ನೀಡಿರುವ ಸೇವಾ ದರ ಸಂಸ್ಥೆಗಳ ವಿವರಗಳನ್ನು ಅನುಬಂಧ-1ರಲ್ಲಿ ಮತ್ತು ಇದರ ಮೇಲ್ವಿಚಾರಣೆ ನಿರ್ವಹಿಸುವ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.<br><br>As on date in 689 hoblies, Krishi Yantra Dhare Centres have been established in the State. The details of Service Providers through whom these Centres are being maintained is given in Annexure–1 & the management and monitoring details are given in Annexure–2.</td></tr>
</table>

| | | |
|---|---|---|
| ಈ) | ಹಲವೆಡೆ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡದೆ ಯಂತ್ರಗಳು ತುಕ್ಕು ಹಿಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | ಹಲವೆಡೆ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. 2015-16ನೇ ಸಾಲಿನಲ್ಲಿ ಸ್ಥಾಪಿಸಿರುವ ಕೆಲವು ಕೃಷಿ ಯಂತ್ರಧಾರೆ ಕೇಂದ್ರಗಳ ಆರು ವರ್ಷಗಳ ಒಡಂಬಡಿಕೆ ಅವಧಿಯು ಮುಕ್ತಾಯವಾಗಿದ್ದು, ಸಂಬಂಧಪಟ್ಟ ಸೇವಾ ದರ ಸಂಸ್ಥೆಗಳು ಸದರಿ ಕೇಂದ್ರಗಳನ್ನು ಮುಂದುವರೆಸಲು ಇಚ್ಛೆಪಡದ ಹಿನ್ನೆಲೆಯಲ್ಲಿ ಅಂತಹ ಕೇಂದ್ರಗಳನ್ನು ಇತರೆ ಆಸಕ್ತಿಯುಳ್ಳ ಸೇವಾ ದರ ಸಂಸ್ಥೆಗಳಿಗೆ ಅಥವಾ ಆದ್ಯತೆ ಮೇರೆಗೆ ರೈತ ಉತ್ಪಾದಕ ಸಂಸ್ಥೆಗಳಿಗೆ ಹಸ್ತಾಂತರಿಸಲು ಸರ್ಕಾರಿ ಆದೇಶವನ್ನು ನೀಡಲಾಗಿದ್ದು, ಅದರನ್ವಯ ಕ್ರಮಕೈಗೊಳ್ಳಲಾಗುತ್ತಿದೆ. ಸಂಸ್ಥೆಗಳ ಒಡಂಬಡಿಕೆ ಅವಧಿ ಮುಕ್ತಾಯಗೊಂಡ ಕೃಷಿ ಯಂತ್ರಧಾರೆ ಕೇಂದ್ರಗಳ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.<br><br>It has come to the notice of the Government that some of the krishi yantra dhare centres are not being managed properly.<br><br>As the agreement period of six years of the centres established during 2015-16 has been expired, and as the concerned service providers are not willing to continue the centres. Government Order has been issued regarding handing over these centres to other interested service providers or on priority basis to Farmer Producer Organizations, (FPOs). Accordingly, action is being taken, The service provider wise details of centres for which agreement period is ended is furnished in Annexure – 3. |

**ಸಂಖ್ಯೆ:** AGRI-ASC/101/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

## ಅನುಬಂಧ - 3

2015-16ನೇ ಸ ಲಿನಲ್ಲಿ ಒಡಂಬಡಿಕೆ ಅವಧಿ ಮುಕ್ತಾಯಗೊಂಡ ಸಂಸ್ಥೆಗಳ ಹಾಗೂ ಕೃಷಿ ಯಂತ್ರಧಾರೆ ಕೇಂದ್ರಗಳ ವಿವರಗಳು ಈ ಕೆಳಕಂಡಂತಿರುತ್ತದೆ:

| ಕ್ರ. ಸಂ. | ಸೇವಾದಾರ ಸಂಸ್ಥೆಗಳು | ಕೃಷಿ ಯಂತ್ರಧಾರೆ ಕೇಂದ್ರಗಳ ಸಂಖ್ಯೆ |
|---|---|---|
| 1 | ಮೆ ವಿ. ಎಸ್. ಟಿ. ಟಿಲ್ಲರ್ಸ್ ಟ್ರ್ಯಾಕ್ಟರ್ಸ್ ಲಿ., ಬೆಂಗಳೂರು, | 79 |
| 2 | ಮೆ ಮಹಿಂದ್ರ & ಮಹಿಂದ್ರ ಲಿ(ಸ್ವರಾಜ್), ಪಂಜಾಬ್ | 21 |
| 3 | ಮೆ ಮಹಿಂದ್ರ & ಮಹಿಂದ್ರ ಲಿ.,ಮುಂಬೈ | 33 |
| 4 | ಮೆ ಜಾನ್ ಡೀರ್ ಇಂಡಿಯಾ ಪ್ರೈ.ಲಿ., ಪೂನಾ | 34 |
| | ಒಟ್ಟು | **167** |

## Annexure – 3

The S rvice Provider wise details of krishi yantra dhare centres for which agreement period is expired is given below:

| Sl. No. | Name of the Service Provider | No. of CHS Centres |
|---|---|---|
| 1. | M/s. VST Tillers Tractors Ltd, Bangalore | 79 |
| 2. | M/s. Mahindra & Mahindra Ltd(Swaraj), Punjab | 21 |
| 3. | M/s. Mahindra & Mahindra Ltd, Mumbai | 33 |
| 4. | M/s. John Deere India Pvt Ltd., Pune | 34 |
| | **Total** | **167** |

## ಅನುಬಂಧ - 1 (LCQ - 676)

### ಕೃಷಿ ಯಂತ್ರಧಾರೆ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸೇವಾದಾರ ಸಂಸ್ಥೆಗಳ ವಿವರಗಳು

| ಕ್ರ.ಸಂ. | ಸೇವಾದಾರ ಸಂಸ್ಥೆಗಳ ವಿವರಗಳು (ಮೆ\|\|) | ಸ್ಥಾಪಿಸಿರುವ ಕೇಂದ್ರಗಳ ಸಂಖ್ಯೆ |
|---|---|---|
| 1. | ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಧರ್ಮಸ್ಥಳ | 164 |
| 2. | ಇಂಡಿಯನ್ ಸೋಸೈಟಿ ಆಫ್ ಅಗ್ರಿಬ್ಯುಸಿನೆಸ್ ಪ್ರೊಫೆಷನಲ್ಸ್(ISAP) ನವದೆಹಲಿ. | 11 |
| 3. | ಮಹಿಂದ್ರ & ಮಹಿಂದ್ರ ಲಿ(ಸ್ವರಾಜ್), ಪಂಜಾಬ್ | 21 |
| 4. | ಮಹಿಂದ್ರ & ಮಹಿಂದ್ರ ಲಿ., ಮುಂಬೈ | 33 |
| 5. | ಜಾನ್ ಡೀರ್ ಇಂಡಿಯಾ ಪ್ರೈ.ಲಿ., ಪೂನಾ | 34 |
| 6. | ವಿ.ಎಸ್.ಟಿ. ಟಿಲ್ಲರ್ಸ್ ಟ್ರ್ಯಾಕ್ಟರ್ಸ್ ಲಿ, ಬೆಂಗಳೂರು | 79 |
| 7. | ವರ್ಷ ಅಸೋಸಿಯೇಟ್ಸ್, ಚಿತ್ರದುರ್ಗ | 284 |
| 8. | ಕ್ಲಾಸ್ ಅಗ್ರಿಕ್ಚರಲ್ ಮಷಿನರಿ ಪ್ರೈ.ಲಿ., ಬೆಂಗಳೂರು | 35 |
| 9. | ರೆಹಮಾನ್ ಇಂಜಿನೀರಿಂಗ್ ವರ್ಕ್ಸ್, ಚಿಕ್ಕಮಗಳೂರು | 6 |
| 10. | ವೀರೇಶ್ ಎಂಟಪ್ರೈಸಸ್, ಹುಬ್ಬಳ್ಳಿ | 2 |
| 11. | ಬಾಲಾಜಿ ಅಗ್ರೋ ಇಂಜಿನೀರಿಂಗ್, ಕಲಬುರ್ಗಿ | 11 |
| 12. | ಈಜಿ ಲೈಫ್ ಎಂಟಪ್ರೈಸಸ್, ಉಡುಪಿ | 2 |
| 13. | ಗ್ರಾಮ ಕಿರಣ ಸೇವಾ ಸಂಸ್ಥೆ, ಕಲಬುರ್ಗಿ | 6 |
| 14. | ವಿದ್ಯಶ್ರೀ ಇಂಟಿಗ್ರೇಟೆಡ್ ಡೆವಲೆಪ್ ಮೆಂಟ್ ಅಸೋಸಿಯೇಶನ್, ಕೊಪ್ಪಳ | 1 |
| | ಒಟ್ಟು | 689 |

## Annexure – 1 (LCQ – 676)

### Details of Service Providers functioning under Krishi Yantra Dhare

| Sl.No. | Name of the Service Provider (M/s.) | No. of Centres Established |
|---|---|---|
| 1 | Shree Kshetra Dharmastala Rural Development(R), Dharmastala | 164 |
| 2 | Indian Society for Agribussiness Development Project (ISAP),New Delhi | 11 |
| 3 | Mahindra & Mahindra (Swaraj), Punjab | 21 |
| 4 | Mahindra & Mahindra, Mumbai | 33 |
| 5 | John Deere India Pvt Ltd., Pune | 34 |
| 6 | VST Tillers Tractors Ltd., Bangalore | 79 |
| 7 | Varsha Associates, Chitradurga | 284 |
| 8 | CLAAS Agricultural Machinery, Bangalore | 35 |
| 9 | Rehman Engg Works, Chikkamagaluru | 6 |
| 10 | Veeresh Enterprises, Hubli | 2 |
| 11 | Balaji Agro Engineering, Kalburgi | 11 |
| 12 | Easy Life Enterprises, Udupi | 2 |
| 13 | Grama Kirana Seva Samasthe, Kalburgi | 6 |
| 14 | Vidyashree Integrated Development Association, Koppal | 1 |
| | **Total** | **689** |

ಅನುಬಂಧ - 2 (LCQ - 676)

## ಕೃಷಿ ಯಂತ್ರಧಾರೆ ಯೋಜನೆಯಡಿ ಕೃಷಿ ಯಂತ್ರಧಾರೆ ಕೇಂದ್ರಗಳ ನಿರ್ವಹಣೆ ಹಾಗೂ ಮೇಲ್ವಿಚಾರಣೆಯ ವಿವರಗಳು:

1. ಹೋಬಳಿವಾರು ಕೃಷಿ ಯಂತ್ರಧಾರೆ ಕೇಂದ್ರಗಳನ್ನು ತೆರೆಯಲು ಆಸಕ್ತಿಯುಳ್ಳ ಸೇವಾದಾರ ಸಂಸ್ಥೆಗಳನ್ನು ಆಯ್ಕೆ ಮಾಡಲು, ಆಸಕ್ತಿ ವ್ಯಕ್ತ ಪಡಿಸುವಿಕೆಯನ್ನು (EoI) ಕರೆಯಲಾಗುವುದು.
2. ಹೋಬಳಿವಾರು ಆಯ್ಕೆಯಾದ ಸೇವಾದಾರ ಸಂಸ್ಥೆಗಳಿಗೆ ಕಾರ್ಯಾದೇಶವನ್ನು ನೀಡಿ, ಇಲಾಖೆಯ ಸಹಯೋಗದೊಂದಿಗೆ ಸ್ಥಳೀಯವಾಗಿ ಬೆಳೆಯುವ ಬೆಳೆಗಳನ್ನು ಆಧರಿಸಿ ರೈತರಿಗೆ ಅವಶ್ಯವಿರುವ ಕೃಷಿ ಯಂತ್ರೋಪಕರಣಗಳ ಬಗ್ಗೆ ಪ್ರಾಥಮಿಕ ಸಮೀಕ್ಷೆ (ಬೆಂಚ್ ಮಾರ್ಕ ಸರ್ವೆ) ಕೈಗೊಳ್ಳಲು ತಿಳಿಸಲಾಗುವುದು.
3. ಹೋಬಳಿವಾರು ಪ್ರಾಥಮಿಕ ಸಮೀಕ್ಷೆ ಆಧಾರದ ಮೇಲೆ ಅವಶ್ಯಕವಿರುವ ಟ್ರ್ಯಾಕ್ಟರ್ ಒಳಗೊಂಡಂತೆ ಕೃಷಿ ಯಂತ್ರೋಪಕರಣಗಳ ಪಟ್ಟಿಯನ್ನು ಇಲಾಖೆಯ ಅನುಮತಿ ಪಡೆದು, ಜಿಲ್ಲಾ ಮಟ್ಟದಲ್ಲಿ ಕೃಷಿ ಯಂತ್ರಧಾರೆ ಯೋಜನೆಯ ಅನುಷ್ಠಾನ, ಉಸ್ತುವಾರಿಗಾಗಿ ಹಾಗೂ ಬಾಡಿಗೆ ದರಗಳನ್ನು ನಿಗಧಿಪಡಿಸಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಚರ್ಚಿಸಿ, ಕೃಷಿ ಯಂತ್ರೋಪಕರಣಗಳ ಅನುಮೋದನೆ ಮತ್ತು ಅವುಗಳಿಗೆ ದರಗಳನ್ನು ನಿಗದಿಪಡಿಸಲಾಗುತ್ತದೆ.
4. ಜಿಲ್ಲಾವಾರು ನಿಗಧಿಪಡಿಸಿದ ಸ್ಲಾಬ್ ಗಳಿಗೆ ಅನುಗುಣವಾಗಿ ಸಮಿತಿಯಿಂದ ಅನುಮೋದನೆ ಪಡೆದ ಕೃಷಿ ಯಂತ್ರೋಪಕರಣಗಳನ್ನು ಇಲಾಖೆಯ ಅನುಮೋದಿತ ದರಪಟ್ಟಿಯ ಅನ್ವಯ ಉಪಕರಣಗಳನ್ನು ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ಶೇ.70 ರಷ್ಟು ಸಹಾಯಧನ ಒದಗಿಸಿ ದಾಸ್ತಾನೀಕರಿಸಲಾಗುತ್ತದೆ. ಇಲಾಖಾ ದರಕರಾರಿನಲ್ಲಿ ಇಲ್ಲದಿರುವ ಹಾಗೂ ಕೃಷಿ ಯಂತ್ರಧಾರೆ ಕೇಂದ್ರಗಳಿಗೆ ಅವಶ್ಯವಿರುವ ಕೃಷಿ ಯಂತ್ರೋಪಕರಣ / ಉಪಕರಣಗಳನ್ನು GEM(Government e-Marketplace) / ಕೆ.ಟಿ.ಪಿ.ಪಿ.ಅಧಿನಿಯಮದ ಅನ್ವಯ ಅಥವಾ ಖರೀದಿ ನಿಯಮಾವಳಿಗಳನ್ನು ಒಂದು ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ಸಾಮಾನ್ಯ ಖರೀದಿ ನಿಯಮಾವಳಿಗಳನ್ನು ಪಾಲಿಸಿ ಉಪಕರಣಗಳ ಖರೀದಿ ಮಾಡಿ ದಾಸ್ತಾನು ಮಾಡಲಾಗುತ್ತದೆ.
5. ಕೃಷಿ ಯಂತ್ರಧಾರೆ ಕೇಂದ್ರಗಳಿಗೆ ನೀಡುವ ಸರ್ಕಾರದ ಸಹಾಯಧನವನ್ನು ಒದಗಿಸುವ ಮುನ್ನ ಸಂಸ್ಥೆಯು ದಾಸ್ತಾನು ಪಡೆದಿರುವ ಕೃಷಿ ಯಂತ್ರೋಪಕರಣಗಳನ್ನು ಇಲಾಖಾ ಅಧಿಕಾರಿಗಳು ಕಡ್ಡಾಯವಾಗಿ ಪರಿಶೀಲನೆ ಮಾಡಿ ಖಚಿತ ಪಡಿಸಿಕೊಂಡ ನಂತರವೇ ಸಹಾಯಧನವನ್ನು ಒದಗಿಸಲಾಗುತ್ತದೆ.
6. ಜಿಲ್ಲಾ ಮಟ್ಟದ ಸಮಿತಿಯು ಕೃಷಿ ಯಂತ್ರೋಪಕರಣಗಳವಾರು ನಿಗದಿಪಡಿಸಿದ ಬಾಡಿಗೆ ದರಗಳಿಗೆ ಅನುಗುಣವಾಗಿ ಬಾಡಿಗೆ ದರಗಳನ್ನು ಪ್ರದರ್ಶಿಸಿ, ಕೃಷಿ ಯಂತ್ರೋಪಕರಣಗಳನ್ನು ಬೇಡಿಕೆಯಿರುವ ರೈತರಿಗೆ ನೀಡಲಾಗುತ್ತದೆ.
7. ಪ್ರಸ್ತುತ ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ದಾಸ್ತಾನು ಮಾಡಿರುವ ಯಂತ್ರೋಪಕರಣಗಳ ಬಾಡಿಗೆ ದರಗಳನ್ನು, ಪ್ರಮುಖವಾಗಿ ಇಂಧನ(fuel) ಮತ್ತು ನಿರ್ವಹಣಾ (Maintenance) ಹಾಗೂ ಪ್ರಚಲಿತವಿರುವ ಬಾಡಿಗೆ ದರಗಳನ್ನು ಮತ್ತು ಇತರೆ ಅಂಶಗಳನ್ನು ಪರಿಗಣಿಸಿ, ಜಿಲ್ಲಾ ಅನುಷ್ಠಾನ ಸಮಿತಿಯು ಪ್ರತಿ ಆರು ತಿಂಗಳಿಗೊಮ್ಮೆ ಮತ್ತು ಹಂಗಾಮಿನ ಸಮಯದಲ್ಲಿ ಪ್ರತಿ ಹದಿನೈದು ದಿನಗಳಿಗೊಮ್ಮೆ ಬಾಡಿಗೆ ದರಗಳನ್ನು ಪರಿಷ್ಕರಿಸಲು ಅವಕಾಶವಿರುತ್ತದೆ.

8. ಇಲಾಖೆಯ ಅಧಿಕಾರಿಗಳು ಕೃಷಿ ಯಂತ್ರಧಾರೆ ಕೇಂದ್ರಕ್ಕೆ ಕಾಲಕಾಲಕ್ಕೆ ಭೇಟಿ ನೀಡಿ ಕೇಂದ್ರದ ನಿರ್ವಹಣೆ ಮತ್ತು ಲೆಕ್ಕಪತ್ರ ನಿರ್ವಹಣೆಗಳನ್ನು ಪರಿಶೀಲಿಸಲಾಗುವುದು.
9. ಸೇವಾದರ ಸಂಸ್ಥೆಗಳು ಪ್ರತಿ ಮಾಹೆಯ ಕೇಂದ್ರದ ಪ್ರಗತಿ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ.
10. ಪ್ರತಿ ಕೃಷಿ ಯಂತ್ರಧಾರೆ ಕೇಂದ್ರಗಳಿಗೆ ರೂ.1.50 ಲಕ್ಷ ಆಡಳಿತಾತ್ಮಕ ವೆಚ್ಚವನ್ನು ಒಂದು ಬಾರಿ ಮಾತ್ರ ನೀಡಲಾಗುತ್ತದೆ ಹಾಗೂ ನಿಗದಿಪಡಿಸಿದ ಸ್ಲಾಬ್ ಗೆ ನಿಗದಿಪಡಿಸಿದ ಪೂರ್ಣ ಮೊತ್ತವನ್ನು ಉಪಯೋಗಿಸಿಕೊಂಡ ನಂತರ, ನೂತನ ಯಂತ್ರೋಪಕರಣಗಳನ್ನು ಖರೀದಿಸಲು ಮತ್ತು ಅನುಪಯುಕ್ತ ಯಂತ್ರೋಪಕರಣಗಳನ್ನು ಬದಲಿಸಿ ಹೊಸ ಯಂತ್ರೋಪಕರಣಗಳನ್ನು ಖರೀದಿಸಲು ಅನುಕೂಲವಾಗುವಂತೆ ರೂ.10.00 ಲಕ್ಷಕ್ಕಿಂತ ಹೆಚ್ಚಿನ ವಾರ್ಷಿಕ ವಹಿವಾಟು ಹೊಂದಿರುವ ಕೇಂದ್ರಗಳಿಗೆ ರೂ.5.00 ಮತ್ತು ರೂ.10.00 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ವಹಿವಾಟು ಹೊಂದಿರುವ ಕೇಂದ್ರಗಳಿಗೆ ರೂ.2.50 ಲಕ್ಷಗಳನ್ನು ಶೇ.50 ರ ಸಹಾಯಧನದಂತೆ ನೀಡಲಾಗುತ್ತದೆ.

## Annexure – 2 (LCQ – 676)

## Details of Management and Monitoring of Krishi Yantra Dhare Kendras under Krishi Yantra Dhare Scheme

1. Expression of Interest (EoI) will be called, for selection of Service Providers to express their willingness for establishment of Hobliwise Krishi Yantra Dhare Centres.
2. Hobliwise work order will be issued selected service providers with an instruction to carry out Preliminary Bench Mark Survey about the farm machineries required by the farmers as per the local cropping pattern in coordination with the department.
3. Based on the Hobliwise Preliminary Bench Mark Survey conducted, the list of farm machinery prepared with permission of the department, will be discussed and approved by the District Level Committee constituted under the Chairmanship of Chief Executive Officer (CEO) of the Zilla Panchayat for implementation, monitoring and fixation of rental charges of the farm equipments to be shelved in CHSC Centres.
4. The farm machineries approved in the District Level Committee, procured from the approved rate contract list of the department and shelved in the CHSC by providing a subsidy of 70 %. The farm machineries which are not available in the departmental rate contract list which are required by the krishi yantra dhare centres can be procured through GEM (Government e-Market)/KTPP Act and for the equipments less than one lakh by general purchase regulations.
5. The subsidy for the farm machineries which are shelved in the krishi yantra dhare centres will be provided only after verification and conformation from department officials.

6. The farm machinery required by the farmers will be provided on rental basis as per approved rates by the District Level Committee which are displayed in the CHSC.
7. The District Level Committee can revise the rental rates of the farm machineries shelved krishi yantra dhare centres once in six months or fortnightly during the peak seasons, considering the expenditure of fuel, maintenance and prevailing rental rates.
8. The departmental officers have to visit the krishi yantra dhare centres from time to time to review the maintenance and the account keeping of the centres.
9. The Service Providers will submit the progress report to the concerned officers every month.
10. An Administrative cost of Rs.1.50 lakhs will be provided one time to each krishi yantra dhare centre. After complete utilization of slab wise allocated subsidy, based on the annual turnover of the centres a subsidy of Rs.5.00 lakhs is being given for centres with annual turnover of Rs.10.00lakhs and Rs.2.50 lakhs for centres with less than Rs.10.00lakhs of annual turnover, for procurement of new farm machineries and replacement of equipments at the rate of 50% subsidy.